ಬಾದಾಮಿಯಲ್ಲಿ ಪ್ರವಾಸಿಗರಿಗೆ ಸೌಲಭ್ಯಗಳನ್ನೊದಗಿಸುವುದು

೩೧೧. (೬) ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ವಾರ್ತಾ, ಪ್ರಚಾರ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಐತಿಹಾಸಿಕ ಸ್ಥಳವಾದ ಬಾದಾಮಿಯಲ್ಲಿ ಪ್ರವಾಸಿಕರಿಗೆ ವಸತಿಯ ತೊಂದರೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರಕಾರದವರು ಈ ಬಗ್ಗೆ ಕೈಗೊಂಡ ಕ್ರಮವೇನು?

ಇ) ಈ ವರ್ಷದ ಅವಧಿಯಲ್ಲಿ ವಸತಿಯನ್ನೊದಗಿಸುವ ಕ್ರಮವನ್ನು ಕೈಗೊಳ್ಳಲಾಗುವುದೇ?

ಶ್ರೀ ಎಂ. ರಘುಪತಿ (ಪ್ರಚಾರ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—

ಅ) ಹೌದು.

ಆ) ಪಾಕಶಾಲೆ ಮತ್ತು ಭೋಜನ ಶಾಲೆ ಹಾಗೂ ೧೦ ಕೊಠಡಿಗಳಿರುವ ಅಧಿಕ ವೆಚ್ಚದಲ್ಲಿ ನಿರ್ಮಾಣದ ಕೆಲಸವು ಕಾರ್ಯ ರೂಪದಲ್ಲಿದೆ.

ಇ) ಈ ವರ್ಷ ಕ್ರಮ ಕೈಗೊಳ್ಳಲು ಪ್ರಯತ್ನಿಸುತ್ತೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಮಾನ್ಯ ಅಧ್ಯಕ್ಷರೆ, ಮೂರು ವಿಷಯಗಳ ಬಗ್ಗೆ ತಮ್ಮನ್ನು ಕೇಳುತ್ತಾ ಇದ್ದೇನೆ. ಮೊದಲನೆಯದು, ಬಾದಾಮಿಯಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ೧೮ ರೂಮುಗಳನ್ನು ಕಟ್ಟಬೆ ಕು ಎಂದು ಮೊದಲುಯೋಜನೆ ಸಿದ್ಧವಾಗಿತ್ತು. ಈಗ ೧೦ ರೂಮುಗಳನ್ನು ಕಟ್ಟತಕ್ಕ ತೀರ್ಮಾನ ತೆಗೆದುಕೊಂಡಿದ್ದಾರೆ, ಇನ್ನು ಉಳಿದಿರತಕ್ಕ ೮ ರೂಮುಗಳ ಬಗ್ಗೆ ಏನು ಹೇಳುತ್ತೀರಿ ಎಂದು ಕೇಳುತ್ತೇನೆ. ಎರಡನೆಯದು, ಬಾದಾಮಿ, ಪಟ್ಟದಕಲ್ಲು, ಮುಂತಾದ ೫ ಐತಿಹಾಸಿಕ ಸ್ಥಳಗಳನ್ನು ಹೊಂದಿರತಕ್ಕ ಆ ಸ್ಥಳದಲ್ಲಿ ದೆ ಶ ವಿದೇಶಗಳಿಂದ ಬರತಕ್ಕ ಪ್ರವಾಸಿಗರಿಗೆ ವಾಹನ ಸೌಕರ್ಯವಿಲ್ಲದೆ ತೊಂದರೆಯಾಗಿದೆ. ಆದುದರಿಂದ ಅಲ್ಲಿ ಟೆಂಪೊ ರೀತಿಯ ಮಿನಿ ಬಸ್ಸನ್ನು ಒದಗಿಸಲಿಕ್ಕೆ ಸರ್ಕಾರದವರು ಮನಸ್ಸು ಮಾಡುತ್ತಾರೆಯೇ? ಪಟ್ಟದಕಲ್ಲು ಐತಿಹಾಸಿಕ ವಾದ ಸ್ಥಳ, ತಾವು ಆ ಸ್ಥಳವನ್ನು ನೋಡಿರಲಿಕ್ಕಿಲ್ಲ, ತಾವು ಬಂದರೆ ಒಳ್ಳೆಯದು. ಪ್ರವಾಸಿಗರು ಬಂದು ಹೋಗಲು ಪ್ರಾಮುಖ್ಯವಾದ ಸ್ಥಳ. ಅಲ್ಲಿ ಪ್ರವಾಸಿಗರಿಗೆ ಯಾವುದೇ ರೀತಿಯಿಂದ ವಸತಿ ಸೌಕರ್ಯವಿಲ್ಲ, ತಿಂಡಿ ತಿನಿಸುಗಳಿಗೆ ಅನಾನುಕೂಲತೆ ಇದೆ. ಹಿಂದೆ ಪ್ರವಾಸಿ ಮಂದಿರವನ್ನು ಕಟ್ಟಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದರು, ಅವರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಎಂ. ರಘುಪತಿ.—ಮಾನ್ಯ ಸಭಾಪತಿಯವರೆ, ಈ ವರ್ಷ ೧೦ ಕೊಠಡಿಗಳನ್ನು ಕಟ್ಟಬೆ ಕು ಎಂದು ನಿರ್ಣಯ ತೆಗೆದುಕೊಂಡಿದ್ದೇವೆ, ಉಳಿದ ೮ ಕೊಠಡಿಗಳನ್ನು ಮುಂದಿನ ವರ್ಷ ಕಟ್ಟುತ್ತೇವೆ. ಈಗ ಇದಕ್ಕೆ ೧೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಇದನ್ನು ಪೂರೈಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಮತ್ತೆ ಐತಿಹಾಸಿಕ ಪ್ರದೇಶವಾಗಿರತಕ್ಕ ಆ ಸ್ಥಳಕ್ಕೆ ಅಧಿವೆ ಶನ ಮುಗಿದ ಮೇಲೆ ಬರಬೇಕು ಎಂದು ಇದ್ದೇನೆ, ನಾನು ಹಿಂದೆ ಹೋಗಿದ್ದೇನೆ, ಮಂತ್ರಿಯಾದ ಮೇಲೆ ಹೋಗಲಿಲ್ಲ, ಖಂಡಿತವಾಗಿಯೂ ಅಲ್ಲಿಗೆ ಬರುತ್ತೇನೆ. ಮೊನ್ನೆತಾನೇ ಸಂಬಂಧಪಟ್ಟ ಸಮಿತಿಯ ಸಭೆ ನಡೆಯಿತು. ಈಗ ತಾವು ಏನು ಸೂಚಿಸಿದ್ದೀರಿ, ಆ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಬಸ್‌ಗಳನ್ನು ಏರ್ಪಾಟು ಮಾಡುವುದು ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ, ಆ ಕಾರ್ಯಕ್ರಮದಲ್ಲಿ ಇದನ್ನೂ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

Regarding expenditure and maintenance of SC/ST hostel in the State

(103) SRI SURYANARAYA RAO.—Will the Minister for Social Welfare be pleased to state:—

(a) How many SC/ST hostels are there in our State?

(b) How much amount is spent towards their maintenance and what is the expenditure incurred on each border?